

# ಎಚ್1ಎನ್1 ಆತಂಕ ಬೇಡ

ಇಂದು ಎಚ್1ಎನ್1 (ಸ್ವೈನ್ ಫ್ಲೂ ಅಥವಾ ಹಂದಿ ಜ್ವರ) ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗುತ್ತಿದೆ. ಎಡೆಬಿಡದೇ ಕಾಡುವ ನೆಗಡಿ, ಗಂಟಲು ನೋವು, ತಲೆನೋವು, ದೇಹದ ನೋವು, ಬಳಲಿಕೆ, ಭೇದಿ, ಕೆಮ್ಮು, ವಾಂತಿ ಇವೆಲ್ಲಾ ಎಚ್1ಎನ್1 ವೈರಸ್ ರೋಗದ ಲಕ್ಷಣಗಳು.

■ ಡಾ. ವಸುಂಧರಾ ಭೂಪತಿ

ಡಾಕ್ಟ್ರೇ, ಒಂದು ವಾರದಿಂದ ತಲೆನೋವು, ಜ್ವರ, ಗಂಟಲು ನೋವು, ಸುಸ್ತು ಆಗುತ್ತಿದೆ' ಎಂದರು 55 ವರ್ಷದ ಗೃಹಿಣಿ ರಾಜಮ್ಮ. ಹದಿನಾರು ವರ್ಷದ ವಿನಯ್ 'ಡಾಕ್ಟ್ರೇ, ನನಗೆ ಎಂಟು ಹತ್ತು ದಿನಗಳಿಂದ ನೆಗಡಿ, ಗಂಟಲು ನೋವು, ಆಯಾಸ ಜ್ವರ ಇದೆ. ಎಷ್ಟು ಔಷಧಿ ತೆಗೆದುಕೊಂಡರೂ ಕಡಿಮೆಯೇ ಆಗುತ್ತಿಲ್ಲ. ಏನಾದರೂ ದಾರಿ ತೋರಿಸಿ' ಎಂದು ಅಲವತ್ತುಕೊಂಡ.

ರಾಜಮ್ಮ ಮತ್ತು ವಿನಯ್ ಇಬ್ಬರ ಲಕ್ಷಣಗಳನ್ನು ನೋಡಿದಾಗ ವೈರಲ್ ಜ್ವರ ಇರಬಹುದೆಂಬ ಅನುಮಾನ ಬಂದಿತು. ಆದರೆ ಇದು ಎಚ್1ಎನ್1 ಹೌದೇ ಎಂದು ತಿಳಿಯಲು ಅವರನ್ನು ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಿಸಿಕೊಂಡು ಬನ್ನಿ ಎಂದು ಕಳಿಸಲಾಯಿತು. ಈ ಎರಡೂ ಪ್ರಕರಣಗಳಲ್ಲಿಯೂ ಎಚ್1ಎನ್1 ಇರುವುದು ಪರೀಕ್ಷೆಯಿಂದ ದೃಢಪಟ್ಟಿತು.

ಇಂದು ಎಚ್1ಎನ್1 (ಸ್ವೈನ್ ಫ್ಲೂ ಅಥವಾ ಹಂದಿ ಜ್ವರ) ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗುತ್ತಿದೆ. ಎಡಬಿಡದೇ ಕಾಡುವ ನೆಗಡಿ, ಗಂಟಲು ನೋವು, ತಲೆನೋವು, ದೇಹದ ನೋವು, ಬಳಲಿಕೆ, ಭೇದಿ, ಕೆಮ್ಮು, ವಾಂತಿ ಇವೆಲ್ಲಾ ಎಚ್1ಎನ್1 ವೈರಸ್ ರೋಗದ ಲಕ್ಷಣಗಳು. ಇದೊಂದು ಸಾಂಕ್ರಾಮಿಕ ರೋಗ ಅಂದರೆ ಒಬ್ಬರಿಂದ ಒಬ್ಬರಿಗೆ ಬೇಗನೇ ಹರಡುವ ರೋಗ. ಆದ್ದರಿಂದ ಸರಿಯಾದ ಚಿಕಿತ್ಸೆ ಪಡೆಯುವುದು ಬಹುಮುಖ್ಯ. ಹಾಗೆಯೇ ಈ ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸುವುದೂ ಕೂಡ ಅತ್ಯಗತ್ಯ.

ಸಾಮಾನ್ಯವಾಗಿ ಎಚ್1ಎನ್1ನ ಲಕ್ಷಣಗಳು ವೈರಸ್ ಸೋಂಕು ತಗುಲಿದ ಮೂರರಿಂದ ಐದು ದಿನಗಳ ನಂತರ ಹೆಚ್ಚಾಗುತ್ತವೆ. ವಯಸ್ಕರು ಸೋಂಕು ತಗುಲಿದ ದಿನದಿಂದ ಏಳೆಂಟು ದಿನಗಳಲ್ಲಿ ಮತ್ತು ಮಕ್ಕಳು ಸುಮಾರು ಹತ್ತು ದಿನಗಳ ನಂತರ ಈ ರೋಗವನ್ನು ಇತರರಿಗೆ ಹರಡಬಲ್ಲರು. ಆದ್ದರಿಂದ ಈ ರೋಗ ಬಂದವರಿಗೆ ಪ್ರತ್ಯೇಕವಾಗಿ ಪರಿಣಾಮಕಾರಿ ಚಿಕಿತ್ಸೆ ನೀಡುವುದು ಬಹಳ ಅಗತ್ಯ.

## ಸಾಮಾನ್ಯ ಫ್ಲೂ

ಎಚ್1ಎನ್1 ರೋಗವು ಮೊದಲು ಹಂದಿಗಳಲ್ಲಿ ಕಾಣಿಸಿಕೊಂಡಿದ್ದರಿಂದ ಇದಕ್ಕೆ ಸ್ವೈನ್ ಫ್ಲೂ (ಹಂದಿ ಜ್ವರ) ಎಂದು ಹೆಸರು ಬಂದಿದೆ. ಎಚ್1ಎನ್1 ಹಂದಿಗಳಲ್ಲಿ ಕಂಡುಬರುವ ಜ್ವರ. ಇದು ವೈರಸ್‌ಗಳಿಂದ ಬರುತ್ತದೆ. ಇದನ್ನು ಎಚ್1ಎನ್1 ಇನ್‌ಫ್ಲುಯೆಂಜಾ ಎಂದೂ ಕರೆಯುತ್ತಾರೆ. ಫ್ಲೂ ಬಂದರೆ ಕೆಮ್ಮು ಮತ್ತು ಶೀತ ಹೆಚ್ಚಾಗುತ್ತದೆ. ಎಚ್1ಎನ್1 ಒಂದು ಸಾಮಾನ್ಯ ಫ್ಲೂ ರೋಗವಾಗಿದೆ. ಸರಿಯಾಗಿ ಚಿಕಿತ್ಸೆ ಪಡೆದುಕೊಂಡರೆ ಇದು ಗುಣವಾಗುವ ರೋಗವಾಗಿದೆ. ಅದ್ದರಿಂದ ಇದರ ಬಗ್ಗೆ ಯಾವುದೇ ತಪ್ಪುಕಲ್ಪನೆಗಳು ಮತ್ತು ಆತಂಕ ಬೇಡ.

ಎಚ್1ಎನ್1 ಇತ್ತೀಚಿನ ದಿನಗಳಲ್ಲಿ ಬಹುಬೇಗ ಹರಡುತ್ತಿದೆ. ಇತರ ಫ್ಲೂಗಳು ಕೆಲವು ಋತುಗಳಲ್ಲಿ ಕಂಡುಬಂದರೆ ಎಚ್1ಎನ್1 ಎಲ್ಲಾ ಕಾಲದಲ್ಲಿಯೂ ಕಂಡುಬರುವ ರೋಗವಾಗಿದೆ. ಸರಿಯಾಗಿ ಚಿಕಿತ್ಸೆ ದೊರೆಯದೇ ಸಾಯುವವರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಎಚ್1ಎನ್1 ಬಗ್ಗೆ ಜನಸಾಮಾನ್ಯರಲ್ಲಿ ಭೀತಿ ಇದೆ. ಹಾಗೆ ನೋಡಿದರೆ ಅನೇಕ ರೋಗಗಳು ಸಾವಿಗೆ ಕಾರಣವಾಗುತ್ತವೆ. ಉದಾಹರಣೆಗೆ ಕ್ಷಯ (ಟಿಬಿ), ಡೆಂಗ್ಯೂ ಇತ್ಯಾದಿ. ಆದ್ದರಿಂದ ಎಚ್1ಎನ್1 ಬಗ್ಗೆ ಸರಿಯಾದ ಮಾಹಿತಿ ತಿಳಿದುಕೊಂಡು ಸೂಕ್ತ ಚಿಕಿತ್ಸೆ ಪಡೆದುಕೊಂಡರೆ ಗುಣವಾಗುತ್ತದೆ.

## ರೋಗ ಹರಡುವ ರೀತಿ

ಎಚ್1ಎನ್1 ಸೋಂಕು ಪೀಡಿತ ವ್ಯಕ್ತಿ ಕೆಮ್ಮಿದಾಗ ಅಥವಾ ಸೀನಿದಾಗ ವೈರಸ್‌ಗಳು ಗಾಳಿಯಲ್ಲಿ ಸೇರಿ ಬೇರೆ ಜನರು ಉಸಿರಾಡಿದಾಗ ಅವರ ದೇಹವನ್ನು ಸೇರುತ್ತವೆ. ಈ ವೈರಸ್‌ಗಳು ಕುರ್ಚಿ, ಮೇಜು, ಚಿಲಕ ಇತ್ಯಾದಿಗಳಲ್ಲಿ ಸೇರಿ ಅವುಗಳನ್ನು ಸ್ಪರ್ಶಿಸಿದಾಗ ಬೇರೆಯವರಿಗೆ ಶೀಘ್ರವಾಗಿ ಹರಡುತ್ತವೆ. ಎಚ್1ಎನ್1 ಈಗಾಗಲೇ ಅಮೆರಿಕ, ಮೆಕ್ಸಿಕೊ, ಜಪಾನ್, ಸ್ಪೈನ್, ಇಂಗ್ಲೆಂಡ್ ಮತ್ತಿತರ ದೇಶಗಳಲ್ಲಿ ವ್ಯಾಪಕವಾಗಿ ಹರಡಿದ್ದು ಪೂರ್ವಾರ್ಧಗೋಳಕ್ಕೂ ಕಳೆದ ಕೆಲವು ವರ್ಷಗಳಿಂದ ಲಗ್ಗೆ ಇಟ್ಟಿದೆ.

ಎಚ್1ಎನ್1 ಸಾಮಾನ್ಯವಾಗಿ ಫ್ಲೂ ತರಹವೇ ಆರಂಭವಾಗುತ್ತದೆ. ಮಕ್ಕಳಲ್ಲಿ ಚರ್ಮದಲ್ಲಿ ಗಂಧೆ, ಚರ್ಮ ನೀಲಿ ಬಣ್ಣಕ್ಕೆ ತಿರುಗುವುದು ಮತ್ತು ನೀರು ಕುಡಿಯದೇ ಇರುವ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಮೊದಲ ಹಂತದ ಲಕ್ಷಣಗಳನ್ನು ನೋಡಿ ಯಾರೂ ಇದು ಎಚ್1ಎನ್1 ಎಂದು ಖಚಿತವಾಗಿ ಹೇಳಲು ಬರುವುದಿಲ್ಲ. ಆದರೆ ಉಸಿರಾಟದಲ್ಲಿ ತೊಂದರೆ, ಒಮ್ಮೊಮ್ಮೆ ಮೂಗಿನಿಂದ ರಕ್ತ ಹೊರಬರುವ ಲಕ್ಷಣಗಳು ಕಂಡುಬಂದರೆ ಪರೀಕ್ಷೆ ಮಾಡಿಸಿ ಇದು ಎಚ್1ಎನ್1 ಎಂದು ತಿಳಿದುಕೊಳ್ಳಬಹುದು. ವೈದ್ಯರಿಗೆ